

**ಎಡದಿಂದ ಬಲಕ್ಕೆ:**

1. ಆಯವ್ಯಯದ ಬಗೆಗೆ ಹೇಳಿದರೆ ಅಂಗಾಂಗ ಎಂದುಕೊಂಡರೇ? (4)
3. ಪರಿಣಾಮವೇನೇ ಇರಲಿ, ಅದು ಓಂಕಾರ (3)
4. ಜೇನು ಮಾರುವುದೇ ಅವನ ಬದುಕು (3)
6. ನಾರದರ ಆ ಕಥೆಗೆ ಯಾವುದೇ ತಳಹದಿ ಇಲ್ಲ (4)
7. ಮೂರ್ಖರ ಸಹವಾಸ ಅಪಾಯಕರ (3)
9. ಕನ್ನಡನಾಡಿನ ದಟ್ಟಡವಿ ಗೊತ್ತೇ? (3)
11. ಪದ್ಯ ಸಾಹಿತಿಯ ಮಗಳ ಹೆಸರೂ ಪದ್ಯದಂತೆಯೇ (3)
13. ವೀಣಾವಾದನದ ಈ ಕ್ರಮ ಹೊಸದು ಹೌದು (3)
15. ತಾಕಲಾರದು ಬಿಡಿ ನಕ್ಷತ್ರ ಪ್ರಪಂಚ (4)
17. ಮುರುಗನ ಮಹಾಭಕ್ತ. ಆದರೆ ಹಳ್ಳಿಯ ಮುಗ್ಧ (3)
18. ರಾಜ್ಯ ಸೇರಿಸುವ ಮೊದಲು ಹೊಳೆಯುವಂತೆ ಮಾಡು (3)
19. ಚೂರೂ ಬಿಳುಪಿಲ್ಲ, ಆಕಳ ಮರಿ (4)

**ಮೇಲಿಂದ ಕೆಳಕ್ಕೆ:**

1. ಯಾವನಿಗೇ ಆದರೂ ಇದೇ ಭೂಮಿ (3)
2. ರಾಜ್ಯವನ್ನಾಳುತ್ತಿದ್ದ ಸುಲ್ತಾನನ ಮಂತ್ರಿ (3)
3. ಪರಿಹಾರ ಕೋರಿ ಬಂದವರಿಗೆ ಹೊಡೆತ (3)
5. ನಾಳಿನ ವೇಳೆಗೆ ಅರಳೀತು ತಾವರೆ (3)
7. ಕನಸಿನ ವಿಚಾರ ಮನಸಿಗೆ ಸಂಬಂಧಿಸಿದ್ದು (4)
8. ಅಲ್ಲಿಂದ ಕಾಲುಕಿತ್ತ. ಅದಕ್ಕೇ ತಪ್ಪಿತಸ್ಥನಾದ (4)
9. ಕೊರಕಲನ್ನ ದಾಟಿದವ ಗುಮಾಸ್ತ (4)
10. ಮಾನವನ ಗುಣ ಕುರಿತ ಹೊಸ ಅಳತೆ (4)
12. ಗುರುವಿನಂತೆಯೇ ಅವನಿಗೂ ಯಾವುದೇ ಬಂಧ ಇಲ್ಲ (3)
14. ವಶಕ್ಕೆ ತರಿಸುವ ಮುನ್ನ ಚೆನ್ನಾಗಿ ಗಮನಿಸು (3)
15. ತೋರಿಕೆಗಾಗಿ ಈ ಧ್ವನಿ ಎಷ್ಟು ಎತ್ತರ! (3)
16. ತಕರಾರು ಬೇಡವೆಂದು ಈ ಒಪ್ಪಂದ (3)

## ಪದಬಂಧ: 15-4-2010ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅವಿರೋಧ; 3. ವಿರಸ; 4. ನಡುಕ; 6. ಅಂತರಾಳ; 7. ಹರಿಹರ; 9. ತಿಲತ್ತೈಲ; 12. ಸದುಪಾಯ; 14. ಗರೀಬ; 15. ಗಹನ; 16. ಗೆಣೆಕಾರ.

**ಮೇಲಿಂದ ಕೆಳಕ್ಕೆ:**

1. ಅಸದಳ; 2. ಧನದಾಹ; 3. ವಿನೀತ; 5. ಕಲಹ; 6. ಅಂದಗಾತಿ; 8. ರಸಮಯ; 10. ಲವಂಗ; 11. ಲಗುಬಗೆ; 12. ಸಡಗರ; 13. ಪಾವನ.

# ಮಂಡೂಕ ವಿಸ್ಮಯ

## 'ಅತಿ ದೊಡ್ಡ ಕಪ್ಪೆ'–ಯಾವುದು?

ಅದರ ಹೆಸರು 'ಗೋಲಿಯತ್ ಕಪ್ಪೆ' ನೇರ ನೋಡಿದರೂ ಅದನ್ನು ಕಪ್ಪೆ ಎಂದು ನಂಬುವುದು ಸುಲಭವಲ್ಲ! (ಚಿತ್ರ ನೋಡಿ).

ಏಕೆಂದರೆ ಧರೆಯಲ್ಲಿರುವ ಒಟ್ಟು ಎರಡು ಸಾವಿರದ ಆರುನೂರು ಕಪ್ಪೆ ಪ್ರಭೇದಗಳಲ್ಲೂ 'ಗೋಲಿಯತ್ ಕಪ್ಪೆ'ಯದೇ ಅತ್ಯಧಿಕ ತೂಕ, ಗಾತ್ರ, ಉದ್ದ, ಅದರದು ಒಂದು ಅಡಿ ಮೀರುವ ಉದ್ದ; ಕನಿಷ್ಠ ಮೂರು ಕಿಲೋಗ್ರಾಂ ತೂಕ; ಪ್ರತಿ ಪಾದವೂ ನಿಮ್ಮ ಅಂಗೈಗಿಂತ ವಿಶಾಲ; ಮುಟ್ಟಿದರಂತೂ ತೇವದ ಮರಳು ತುಂಬಿದ ಬಲೂನಿನಂತಹ ಸ್ಪರ್ಶಾನುಭವ; ಹತ್ತಡಿ ದಾಟುವ ಜಿಗಿತ ಸಾಮರ್ಥ್ಯ.

ಅಷ್ಟೆಲ್ಲ ತ್ರಿವಿಕ್ರಮ ದಾಖಲೆಗಳಿದ್ದರೂ ಜಗದಲ್ಲಿ ಈ ಕಪ್ಪೆಯ– ಅದರ ವೈಜ್ಞಾನಿಕ ಹೆಸರು 'ಕಾನಾನಾ ಗೋಲಿಯತ್'– ವಾಸಕ್ಷೇತ್ರ ತುಂಬ ಸೀಮಿತ. ಆಫ್ರಿಕದ 'ಕ್ಯಾಮರೂನ್' ಮತ್ತು 'ನ್ಯೂಗಿನಿ' ದೇಶಗಳ ವೃಷ್ಟಿವನಗಳಲ್ಲಷ್ಟೇ ಅದರ ವಸತಿ. ಅಲ್ಲಿನ ನದಿಗಳ ಭರದ ಪ್ರವಾಹಗಳಲ್ಲಿ ಬೇಟೆಯಾಡುತ್ತ ಜಲಪಾತಗಳಲ್ಲಿ ಮಿಂದು ತಣ್ಣಗಿರುತ್ತ, ನದೀ ಬದಿಯ ನೀರು ತುಂಬಿದ



ಹಳ್ಳಗಳಲ್ಲಿ ಸಂತಾನ ವರ್ಧಿಸಿಕೊಳ್ಳುತ್ತ ಅವುಗಳದು ನೆಮ್ಮದಿಯ ಬದುಕು.

ಆ ನೆಮ್ಮದಿ ಈಗ ಉಳಿದಿಲ್ಲ. ಈಗ್ಗೆ ಎರಡು–ಮೂರು ದಶಕಗಳ ಹಿಂದೆ ಪ್ರಥಮವಾಗಿ ಮನುಷ್ಯರಿಗೆ ಕಂಡ ಗೋಲಿಯತ್ ಕಪ್ಪೆ ಅಂದಿನಿಂದಲೇ ದುರ್ದೆಶೆಯಲ್ಲಿದೆ. ಜಿಗಿಯುವ ಸ್ಪರ್ಧೆಗೆಂದು ರಫ್ತಾಗತೊಡಗಿದ ಈ ಕಪ್ಪೆಗಳು ಅದಕ್ಕೆ ಹೊಂದದಿದ್ದರೂ ಬೇರೆ ಕಾರಣಗಳಿಂದ ಈಗ ಭಾರೀ ದುರ್ಗತಿ; ಅಲ್ಪ ಸಂಖ್ಯೆಯತ್ತ ಅವುಗಳ ಕ್ಷಿಪ್ರ ಅವನತಿ.

ಗೋಲಿಯತ್ ಕಪ್ಪೆಗಳ ವೃಷ್ಟಿವನ ವಸತಿ ಪ್ರಸ್ತುತ ಪ್ರತಿವರ್ಷ ಎರಡು ಲಕ್ಷ ಎಕರೆ ಕುಗ್ಗುತ್ತಿದೆ. ದೂರ ದೂರದ ನೆಲೆಗಳ ಕೃಷಿ ಪಾಷಾಣಗಳ ಸೇರ್ಪಡೆಯಿಂದ ಅವು ಆಶ್ರಯಿಸಿರುವ ನದಿಗಳೆಲ್ಲ ವಿಷಾಕ್ತವಾಗುತ್ತಿವೆ.

ಎಲ್ಲಕ್ಕಿಂತ ಮಿಗಿಲಾಗಿ ಅಲ್ಲಿನ ಮನುಷ್ಯರ ನಾಲಿಗೆಗೆ ಈ ಕಪ್ಪೆಯ ರುಚಿ ಹತ್ತಿದೆ. ಹಾಗಾಗಿ ಅವುಗಳ ಮೇಲೆ ಬೇಟೆಗಾರರ ಧಾಳಿ ನಿರಂತರ. ಇನ್ನೆಲ್ಲಿ ಅವುಗಳಿಗೆ ಉಳಿಗಾಲ?

■ ಎನ್. ವಾಸುದೇವ್